# ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀ ಲಹರ್ ಸಿಂಗ್ ಸಿರೋಯಾ (ವಿಧಾನ ಸಭೆಯಿಂದ ಚುನಾಯಿತರಾದವರು)

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : 711

ಉತ್ತರಿಸಬೇಕಾದ ದಿನಾಂಕ : 25.09.2020.

ಉತ್ತರಿಸಬೇಕಾದ ಸಚಿವರು : ಮಾನ್ಯ ಪಶುಸಂಗೋಪನೆ, ಹಜ್ ಹಾಗೂ ವಕ್ಫ್ ಸಚಿವರು.

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ | ರಾಜ್ಯದಲ್ಲಿ ಹಂದಿ ಹಾಗೂ ಕೋಳಿ ಜ್ವರ ಬಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ: (ಜಿಲ್ಲಾವಾರು ಮಾಹಿತಿ ನೀಡುವುದು) | ಹಂದಿ ಹಾಗೂ ಕೋಳಿ ಜ್ವರ ಬಂದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>**ಹಂದಿ ಜ್ವರ:** (ಬೀದರ್ ಜಿಲ್ಲೆಯ ನಂದಗಾಂ ಗ್ರಾಮದಲ್ಲಿ ಹಂದಿ ಜ್ವರ (ಕ್ಲಾಸಿಕಲ್ ಸ್ವೈನ್ ಫೀವರ್-CSF) ರೋಗವು ಮಾರ್ಚ್-2020 ರಲ್ಲಿ ಧೃಡಪಟ್ಟಿತ್ತು.<br>**ಕೋಳಿ ಶೀತ ಜ್ವರ** : ಮಾರ್ಚ್-2020ರ ಮಾಹೆಯಲ್ಲಿ ಮೈಸೂರು ಜಿಲ್ಲೆ, ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕುಂಬಾರಕೊಪ್ಪಲಿನ ಮೇಟಗಳ್ಳಿ ಮತ್ತು ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕಿನ ಬನ್ನಿಕೋಡು ಗ್ರಾಮಗಳಲ್ಲಿ ಕೋಳಿ ಶೀತ ಜ್ವರವು ಕಾಣಿಸಿಕೊಂಡಿರುತ್ತದೆ. |
| ಆ | ಹಂದಿ ಮತ್ತು ಕೋಳಿ ಜ್ವರ ನಿಯಂತ್ರಣಕ್ಕೆ ಸರ್ಕಾರದಿಂದ ಕೈಗೊಳ್ಳಲಾದ ಕ್ರಮಗಳೇನು? (ಪೂರ್ಣ ವಿವರ ನೀಡುವುದು) | **ಹಂದಿ ಜ್ವರ:** ಹಂದಿ ಜ್ವರ (ಕ್ಲಾಸಿಕಲ್ ಸ್ವೈನ್ ಫೀವರ್) ರೋಗದ ನಿಯಂತ್ರಣಕ್ಕಾಗಿ ರೋಗ ಕಾಣಿಸಿಕೊಂಡ ಗ್ರಾಮದಿಂದ 5 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಹಂದಿಗಳಿಗೆ CSF ರೋಗದ ವಿರುದ್ಧ ಲಸಿಕೆ ಹಾಕಲಾಗಿದ್ದು, ರೋಗವು ಹತೋಟಿಗೆ ಬಂದಿರುತ್ತದೆ.<br>**ಕೋಳಿ ಶೀತ ಜ್ವರ:** ಕೇಂದ್ರದ ಮಾರ್ಗಸೂಚಿಯಂತೆ 1 ಕಿ.ಮೀ ವ್ಯಾಪ್ತಿಯ ರೋಗ ಪೀಡಿತ ವಲಯದಲ್ಲಿ 8448 ಕೋಳಿಗಳನ್ನು 140 ಕೆ.ಜಿ. ಕೋಳಿ ಆಹಾರ ಮತ್ತು 411 ಕೋಳಿ ಮೊಟ್ಟೆಗಳನ್ನು ನಾಶಪಡಿಸಲಾಗಿದೆ. ಸದರಿ ರೋಗೋದ್ರೇಕದಿಂದ ರೈತರಿಗೆ ಉಂಟಾದ ನಷ್ಟಕ್ಕೆ ಪರಿಹಾರವಾಗಿ ಕ್ರಮವಾಗಿ ಮೈಸೂರು ಜಿಲ್ಲೆಗೆ |

| | |
|---|---|
| | ರೂ.4,17,138/- ಹಾಗೂ ದಾವಣಗೆರೆ ಜಿಲ್ಲೆಗೆ ರೂ.2,40,309/- ಗಳನ್ನು ಸಂಬಂಧಿಸಿದವರಿಗೆ ಪಾವತಿಸಲಾಗಿದೆ. ಘಟನಾ ಸ್ಥಳಗಳ 1 ರಿಂದ 10 ಕಿ.ಮೀ ವ್ಯಾಪ್ತಿಯ ಜಾಗೃತ ವಲಯದಲ್ಲಿ ಸರ್ವೇಕ್ಷಣೆ ಕಾರ್ಯಕ್ರಮವನ್ನು ಕ್ರಮಬದ್ಧವಾಗಿ ಕೈಗೊಳ್ಳಲಾಗುತ್ತಿದೆ. |

ಪಸಂಮೀ ಇ-243 ಸಲೆವಿ 2020

ಪ್ರಭು ಬಿ. ಚವ್ಹಾಣ್

ಪಶುಸಂಗೋಪನೆ, ಹಜ್ ಮತ್ತು ವಕ್ಫ್ ಸಚಿವರು,